**ದಿನಾಂಕಃ 16.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಎಸ್.ಎನ್.ಎನ್ ಅವರಿಂದ–**

1. ಅಫಿಡವಿಟ್ ಎಂದರೆ ನನಗೆ ಗೊತ್ತಿಲ್ಲ. ನನಗೆ ಕನ್ನಡ ಓದಲು–ಬರೆಯಲು ಬರುವುದಿಲ್ಲ. ಕೇವಲ ಸಹಿ ಮಾಡುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಕನ್ನಡದಲ್ಲಿ ಬರೆಯಲಾಗಿದೆ ಎಂದರೆ ಸರಿ. ಸದರಿ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಕೊನೆಯಲ್ಲಿ ನಾನು ಹೇಳಿದ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ ಎಂದು ನಮೂದಾಗಿದೆ ಎಂದರೆ ಸರಿ. ಸದರಿ ನನ್ನ ಸಾಕ್ಷಿ ಪ್ರಮಾಣ ಪತ್ರದ ಅಂಶಗಳು ಸತ್ಯವಾಗಿರುತ್ತವೆ ಎಂದು ನಾನು ವೆಂಡರ್ ಜಗದೀಶ್ ಅವರ ಮುಂದೆ ಪ್ರಮಾಣೀಕರಿಸಿರುತ್ತೇನೆ. ಸದರಿ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನು ಪ್ರಮಾಣೀಕರಿಸಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

2. ನಾನು ದಿಃ 02.01.2020 ರಂದು ನೋಟರಿ ಅವರ ಮುಂದೆ ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

3. ನಿಪಿ.3 ದಿಃ07.12.2012 ರ ಪತ್ರಕ್ಕೆ ನಾನು ಎರಡನೇ ಸಾಕ್ಷಿ ದಾರನಾಗಿ ಸಹಿ ಮಾಡಿರುತ್ತೇನೆ. ನಿಪಿ.**3** ಕ್ರಯಕರಾರು ಪತ್ರಕ್ಕೆ ಶಿವಣ್ಣ, ಅವರ ಹೆಂಡತಿ, ಮಗ ಸಹಿ ಮಾಡಿರುತ್ತಾರೆ. ಸಾಕ್ಷಿ ಮುಂದುವರಿದು ನಿಪಿ.**3** ಕ್ಕೆ ವಾದಿ ಆಶಾ ಕೂಡ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 15.07.2013 ರ ಪತ್ರಕ್ಕೆ ಸಹ ನಾನು ಎರಡನೇ ಸಾಕ್ಷಿ ದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.3 ರ ರಿಜಿಸ್ಟರ್ ಸಂಖ್ಯೆ ದಿಃ 15.07.2013 ರ ಪತ್ರದಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ.

4. ಮೊದಲನೆ ಅಗ್ರಿಮೆಂಟ್ನಲ್ಲಿ ಪ್ರತಿವಾದಿಯರಿಗೆ 3 ಲಕ್ಷ ಸಂದಾಯವಾಗಿದ್ದು ಉಳಿಕೆ ಹಣದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯರಿಗೆ ಒಟ್ಟು 5

ಲಕ್ಷ ಸಂದಾಯವಾಗಿರುತ್ತದೆ ಎಂದು ಬರೆಯಿಸಿರುವ ಅಂಶ ಸುಳ್ಳಾಗಿರುತ್ತದೆ ಎಂಬ ಪ್ರಶ್ನೆಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

**5.** ನಿಪಿ.**4** ರ ಪ್ರಕಾರ ಪ್ರತಿವಾದಿಗಳು ವಾದಿಯರಿಂದ **2** ಲಕ್ಷ ಸಾಲ ಮಾಡಿಲ್ಲ ಎಂದರೆ ಸರಿ. ಸದರಿ ನಿಪಿ.3 ಪತ್ರವನ್ನು ಜಗದೀಶ್ ಅವರು ಬರೆದಿರುತ್ತಾರೆ. ಸದರಿಯವರಿಗೆ ಎಷ್ಟು ಕಮೀಷನ್ ಕೊಟ್ಟಿರುತ್ತಾರೆ ನನಗೆ ಗೊತ್ತಿಲ್ಲ. ನಮಗೆ ಕೇವಲ ಸಹಿ ಮಾಡಲು ಹೇಳಿದ್ದರು. ಸದರಿ ಜಗದೀಶ್ ಅವರು ನಿಪಿ.3 ಪತ್ರ ಬರೆದ ನಂತರ ರಿಜಿಸ್ಟರ್ ಗೆ ನಮ್ಮ ಸಹಿಗಳನ್ನು ಪಡೆದಿರುತ್ತಾರಾ ಎಂಬ ಪ್ರಶ್ನೆಗೆ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಸಹಿ ಮಾಡಿರುತ್ತೇವೆ ಬೇರೆ ಎಲ್ಲೂ ಸಹಿ ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

**6.** ಭಾರತವಾಡಿಯಲ್ಲಿ **1** ಎಕರೆಗೆ **40-50** ಲಕ್ಷ ಬೆಲೆ ಬಾಳುತ್ತದೆ ಎಂದರೆ ಈಗ ಅಷ್ಟು ಬೆಲೆ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು, ಆಶಾ, ಮಹದೇವ, ವೆಂಕಟೇಶ ಹಾಗೂ ಸೇರಿಕೊಂಡು ದಾವ ಆಸ್ತಿಯನ್ನು ಕಡಿಮೆ ಬೆಲೆಗೆ ಕಬಳಿಸಲು ಸುಳ್ಳು ಪತ್ರ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿಕೊಂಡೆ ಇರುವುದಿಲ್ಲ ಎಂದರೆ ಸರಿಯಲ್ಲ.

**7.** ನಾನು ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿಃ15.07.2013 ರ ಪತ್ರಕ್ಕೆ ಸಹಿ ಮಾಡಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಾನು ರುಜು ಮಾಡುವ ಮೊದಲು ಒಕ್ಕಣಿಕೆ ಓದಿಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ.

8. ನಿಪಿ.3 ರ ಪತ್ರಕ್ಕೆ ನಾನು ಮೊದಲ ಸಾಕ್ಷಿಯಾಗಿ ಓದಿಕೊಂಡೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ.3 ರ ನೊಂದಣಿ ಸಂಖ್ಯೆಯನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಯಲಾಗಿದೆ ಎಂದರೆ ನಾನು ಪ್ರಮಾಣ ಪತ್ರ ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅದೇ ನೊಂದಣಿ ಸಂಖ್ಯೆಯನ್ನು ದಿಃ 15.07.2013 ರ ಪತ್ರದಲ್ಲಿ ಸಹ ಬರೆಯಲಾಗಿದೆ ಎಂದರೆ ಅದು ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ದಿಃ15.07.2013 ರ

ಪತ್ರಕ್ಕೆ ಸಹಿ ಮಾಡಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿಃ15.07.2013 ರ ಪತ್ರದಲ್ಲಿರುವ ಮೊದಲ ಸಾಕ್ಷಿಯ ಸಹಿ ನನ್ನದೆ ಆಗಿರುತ್ತದೆ ಎಂದರೆ ನಾನು ಕೇವಲ ನಿಪಿ.3 ಕ್ಕೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ.3 ರಲ್ಲಿ, ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹಾಗೂ ನಾನು ದಿಃ15.07.2013 ರಲ್ಲಿರುವ ಸಹಿಗಳು ಒಂದೇ ಆಗಿದ್ದು ಅವು ನನ್ನ ಸಹಿಗಳಾಗಿರುತ್ತವೆ ಎಂದರೆ ಸರಿಯಲ್ಲ.

9. ದಿಃ 29.12.2015 ಪತ್ರದ ಪ್ರಕಾರ ಪ್ರತಿವಾದಿಗಳು ವಾದಿಯರಿಂದ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ವಾದಿಯರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುತ್ತೇವೆ ಎಂದು ಒಪ್ಪಿಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ಎರಡು ಪತ್ರಗಳನ್ನು ಪ್ರತಿವಾದಿಗಳ ಆಸ್ತಿ ಕಬಳಿಸಲು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಸ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.